# ಕಣ್ಣಿಗೆ ಕಟ್ಟುವಂತೆ ನಟಿಸುವುದೇ ಕಲೆ!

## ಸೂರ್ಯ ಕಿರಣ್

### ಝೀಕನ್ನಡ 'ನಾಗಿಣಿ'ಯ ಕಾನಿಷ್ಕ

★ *ಪಾತ್ರಕ್ಕೆ ಬಿಡುವು ಸಿಕ್ಕಂತಾಗಿದೆ?*

ಇದ್ದಕ್ಕಿದ್ದಂತೆ ಪ್ರವೇಶ ನಿಂತಿದ್ದರಿಂದ ಪಾತ್ರದ ಅಗತ್ಯ ಮುಗಿಯಿತು ಎಂದು ನಾನೂ ಭಾವಿಸಿದ್ದೆ. ಮತ್ತೆ ಬರುತ್ತೆ ಎನ್ನುವುದು ತಡವಾಗಿ ಗೊತ್ತಾಯಿತು. ಧಾರಾವಾಹಿಯ ಓಟ ಸರಳವೂ, ನೇರವಾಗಿ ಇರುವುದಿಲ್ಲ. ಸಂಕೀರ್ಣ ಮಾರ್ಗದಲ್ಲಿ ಅನೇಕ ತಿರುವುಗಳು ಇರುತ್ತವೆ. ಅದಕ್ಕೆ ತಕ್ಕಂತೆ ಕಥೆಯ ಹರವು ವಿಸ್ತಾರ ಆಗುತ್ತೆ. ಸಹಜವಾಗಿ ಕೆಲವು ಪಾತ್ರ ಮರೆಗೆ ಸರಿಯಬೇಕಾಗುತ್ತದೆ. ಒತ್ತಡದಿಂದ ಮತ್ತೆ ಅದೇ ಪಾತ್ರಗಳು ಬರುತ್ತವೆ. ಕೆಲವೊಮ್ಮೆ ಹೊಸ ಪಾತ್ರಗಳೂ ಬರುತ್ತವೆ. ಒಟ್ಟಾರೆ ಕಥೆಯ ಎಲ್ಲಾ ಪಾತ್ರಗಳಿಗೆ ನ್ಯಾಯ ಒದಗಿಸುವ ಕ್ರಿಯೆಯಲ್ಲಿ ಇದು ಸಹಜ.

★ *ಪಾತ್ರಗಳ ಮಧ್ಯಂತರ ಬಿಡುವು ನಟನೆಗೆ ಅಡಚಣೆ ಆಗುವುದಿಲ್ಲವೇ?*

ಹಾಗೆ ಅನ್ನಿಸುವುದು ಸಹಜ. ಆದರೆ ಒಬ್ಬ ನಟನಿಗೆ ಹಾಗೆ ಆಗುವುದಿಲ್ಲ. ನಟನೆಯನ್ನು ಮೈಗೂಡಿಸಿಕೊಂಡ ಒಬ್ಬ ಕಲಾವಿದ ಬಣ್ಣ ಹಚ್ಚಿ ಕ್ಯಾಮೆರಾ ಎದುರಾದರೆ ಆ ತೊಡಕು ನಿವಾರಣೆ ಆಗುತ್ತದೆ. ಅಂದರೆ ನಟರಲ್ಲಿ ಅಂತಹ ಸಾಮರ್ಥ್ಯ ಇರಲೇಬೇಕು, ಅದು ಇದ್ದೇ ಇರುತ್ತದೆ. ಸಿನಿಮಾ– ಧಾರಾವಾಹಿ ಎನ್ನುವ ಭೇದ ಇಲ್ಲ ಸಾಮಾನ್ಯವಾಗಿ ಎಲ್ಲಾ ಕಲಾವಿದರೂ ಇಂತಹ ತೊಡಕನ್ನು ಎದುರಿಸುತ್ತಾರೆ.



★ *ಅವಾಸ್ತವ ಕಥೆ ಸಮಾಜಮುಖಿಯಾಗಿ ಹೇಗೆ ಸ್ಪಂದಿಸುತ್ತದೆ?*

ಆರಂಭದಲ್ಲಿ ಪ್ರೋಮೊದಲ್ಲಿಯೇ ಕೊಟ್ಟಿರುತ್ತಾರೆ. ಅದರ ನಿರೂಪಣೆಯನ್ನು ಮಾತ್ರ ವಿಭಿನ್ನವಾಗಿ ಮಾಡುತ್ತಾರೆ. ಬೇರೆ ಬೇರೆ ಸ್ತರದಲ್ಲಿ ತೆಗೆದುಕೊಂಡು ಹೋಗುತ್ತಾರೆ. ಹೊಸತನಕ್ಕೆ ತುಡಿಯುವಾಗ ಹೊಸ ಪ್ರಯೋಗಗಳು ಸಹಜ. ವೀಕ್ಷಕರ ದೃಷ್ಟಿಯಿಂದಲೂ ಈ ರೀತಿಯ ಬದಲಾವಣೆ ಬೇಕಾಗುತ್ತದೆ. ಕಲಾವಿದನಿಗೆ ಅಪರೂಪದ ಪಾತ್ರಗಳೇ ತನ್ನನ್ನು ತಾನು ಗುರುತಿಸಿಕೊಳ್ಳಲು ನೆರವಾಗುತ್ತವೆ. ಕೆಲವೊಂದು ಅತಿಮಾನುಷ ಅಭಿನಯ ತಮಾಷೆ ಅಲ್ಲ. ನಾನು ಕಾನಿಷ್ಕ ಅಂದರೆ ಗರುಡನಾಗಿ ಜನರಿಗೆ ನಂಬಿಕೆ ಬರುವಂತೆ ಅಭಿನಯಿಸಬೇಕು. ದೈಹಿಕ ಮತ್ತು ಮಾನಸಿಕವಾಗಿ ಸಿಕ್ಕಾಪಟ್ಟೆ ಶಕ್ತಿಯನ್ನು ವಿನಿಯೋಗಿಸಬೇಕಾಗುತ್ತದೆ. ಗರುಡ ಪಕ್ಷಿಯ ಹಾವಭಾವವನ್ನೂ ನೋಡಬೇಕಾಗುತ್ತದೆ. ವೀಕ್ಷಕನಿಗೆ ಕಣ್ಣಿಗೆ ಕಟ್ಟುವಂತೆ ಮಾಡಲು ಅದನ್ನು ಅನುಕರಿಸಬೇಕಾಗುತ್ತದೆ. ಹದಿಹರೆಯದಲ್ಲಿಯೇ ಬಣ್ಣ ಹಚ್ಚಿದರೂ ನನಗೆ ಹೆಸರು ತಂದುಕೊಟ್ಟಿದ್ದು 'ರಾಧಾ ಕಲ್ಯಾಣ'ದ ಶಾಂತ ಎನ್ನುವ ಪಾತ್ರ. ಹೆಸರಿಗೆ ವಿರುದ್ಧ ಗುಣ ಇರುವ ಈತ ನನ್ನ ಅಭಿನಯದ ಪಯಣದ ಮೈಲುಗಲ್ಲಿನಲ್ಲಿ ಒಂದು. ಅದರಂತೆಯೇ ಕಾನಿಷ್ಕ ಕೂಡ ಹೌದು.

★ *ನಟನೆಯನ್ನು ಆರಂಭಿಸಿದ್ದು ಹೇಗೆ?*

ನನ್ನ ವರ್ತನೆಯನ್ನು ಕಂಡು ಅಭಿನಯಕ್ಕೆ ಮನೆಯವರು ಪ್ರೋತ್ಸಾಹಿಸಿದರು. ಅದರಲ್ಲಿಯೂ ನನ್ನ ಅಣ್ಣನ ಪಾತ್ರ ದೊಡ್ಡದಿದೆ. ನನಗಾಗ 18 ವರ್ಷ, ಆಗಲೇ ಒಂದು ಸಿನಿಮಾದಲ್ಲಿ ನಟಿಸಿದೆ. ಆಮೇಲೆ ಹಲವು ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳಲ್ಲಿಯೂ ಅವಕಾಶಗಳು ಸಿಕ್ಕವು. ನಟನೆಗೆ ಪ್ರೇರಣೆ ಆಗಿದ್ದು ಶಂಕರ್‌ನಾಗ್. ಅವರ ಅಭಿಮಾನಿ ನಾನು. ನಟನಾದ ಮೇಲೆ ಒಳ್ಳೆಯ ಕಲಾವಿದನಾಗಬೇಕು ಎಂದು ಬಯಸಿ ಇಲ್ಲೇ ಉಳಿದಿದ್ದೇನೆ. ಅಭಿನಯಕ್ಕೆ ಸಿನಿಮಾ– ಟಿವಿ ಎನ್ನುವುದು ಹೇಗೆ ಮುಖ್ಯ ಅಲ್ಲವೋ.. ಹಾಗೆಯೇ ಒಬ್ಬ ಕಲಾವಿದನಿಗೆ ನಾಯಕ– ಖಳನಾಯಕ ಎಂಬ ಪಾತ್ರ ಮುಖ್ಯವಲ್ಲ. ಯಾವುದೇ ಪಾತ್ರವಾದರೂ ಅದಕ್ಕೆ ಎಷ್ಟು ನ್ಯಾಯ ನೀಡುತ್ತೇವೆ ಎನ್ನುವುದು ಮುಖ್ಯ. ಸ್ಟಾರ್‌ಗಿರಿಯನ್ನು ಬಿಟ್ಟು ಆಲೋಚಿಸಿದಾಗ ಇಂತಹ ಸತ್ಯಗಳು ಗೋಚರಿಸುತ್ತವೆ. ಮುಂದೆ ಸ್ಮರಣೀಯ ಸಿನಿಮಾ ಮಾಡಬೇಕು ಎನ್ನುವ ಬಹುದೊಡ್ಡ ಆಶೆಯಿದೆ. ಸದ್ಯ 'ಪಾನಿಪೂರಿ' ಸಿನಿಮಾ ಮಾಡಿದ್ದೇನೆ. ಜೊತೆಗೆ 'ಅರುಂಧತಿ' ಧಾರಾವಾಹಿಯಲ್ಲಿಯೂ ನಟಿಸುತ್ತಿದ್ದೇನೆ. ಬಿಡುವು ಇದ್ದಾಗ ಗೆಳೆಯರ ನಿರ್ದೇಶನದಲ್ಲಿ ಪಾಲು ಪಡೆದು ಅನುಭವ ಪಡೆದಿದ್ದೇನೆ. ಮುಂದೆ ನಿರ್ದೇಶನವನ್ನೂ ಮಾಡಬಹುದು.

★ *ಹೊಸಬರಿಗೆ ಅವಕಾಶ ಹೇಗಿವೆ?*

ಮೊದಲಿನಂತೆ ಸೀಮಿತವಾಗಿಲ್ಲ. ಹಲವು ವಾಹಿನಿಗಳು, ಹತ್ತಾರು ಧಾರಾವಾಹಿಗಳು, ನೂರಾರು ಪಾತ್ರಗಳು ಕಾಣಿಸಿಕೊಳ್ಳುತ್ತವೆ. ಅಂದರೆ ಅವಕಾಶಗಳು ಹೆಚ್ಚಿವೆ. ಹಾಗೆಂದು ಯಾರದೋ ಒತ್ತಾಯಕ್ಕೋ ಅಥವಾ ಶ್ರೀಮಂತಿಕೆಯ ಕಾರಣಕ್ಕೋ ಬಣ್ಣವನ್ನು ಹಚ್ಚಲು ಬರಬಾರದು. ಮೂಲದಲ್ಲಿ ಆಸಕ್ತಿ ಇರಬೇಕು. ನಟನೆಗೆ ಸಂಬಂಧಿಸಿದಂತೆ ಕೆಲವು ಮೂಲತತ್ವಗಳನ್ನು ಕಲಿತುಕೊಂಡು ಬರಬೇಕಾಗುತ್ತದೆ. ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತದೆ. 'ಕಲಾಕೃತಿಯಾಗಿ ಕಲ್ಲನ್ನು ಕೆತ್ತಬಹುದೇ ಹೊರತು ಮಣ್ಣನ್ನು ಕೆತ್ತಲು ಸಾಧ್ಯವಿಲ್ಲ' ನಟನಾಗಿ ಉಳಿಯಬೇಕು ಎಂದರೆ ಮೊದಲೇ ಕೆಲವು ಪಟ್ಟುಗಳನ್ನು ಕಲಿತು ಗಟ್ಟಿಯಾಗಿರಬೇಕು.

■ ರಾಘವೇಂದ್ರ